


# ಮಲ್ಲಿಗೆ ತಂಬಾಕು

**‘ಮಲ್ಲಿಗೆ ತಂಬಾಕು’ ನೋಡಲಷ್ಟೇ ಆಕರ್ಷಕವಲ್ಲ, ಇದರ ಪರಿಮಳವೂ ಅತಿ ಮಾದಕವಾಗಿರುತ್ತದೆ.**

■ ಎಚ್.ಎಸ್. ನಂದಕುಮಾರ್

ಮಲ್ಲಿಗೆ ತಂಬಾಕು – ಈ ಹೆಸರು ಕೇಳುತ್ತಿದ್ದಂತೆ, ‘ಗೋಕುಲಾಷ್ಟಮಿಗೂ ಇಮಾಂ ಸಾಬಿಗೂ ಏನು ಸಂಬಂಧ’ ಎನ್ನುವಂತೆ, ತಂಬಾಕಿಗೂ ಮಲ್ಲಿಗೆಗೂ ಎಲ್ಲಿಂದೆಲ್ಲಿಯ ನಂಟು ಎಂಬ ಪ್ರಶ್ನೆ ಎದುರಾಗುತ್ತದೆ. ಈ ಪ್ರಶ್ನೆಗೆ ಹೂವಿನ ಹಿನ್ನೆಲೆಯೇ ಉತ್ತರ ನೀಡುತ್ತದೆ.

ಆಲಂಕಾರಿಕ ಹೂವಾಗಿ ಈಚೆಗೆ ಹೆಚ್ಚು ಬಳಕೆಯಲ್ಲಿರುವ ಈ ಸಸ್ಯದ ಹೆಸರು ‘ಮಲ್ಲಿಗೆ ತಂಬಾಕು’. ‘ಫ್ಲವರಿಂಗ್ ಟೊಬ್ಯಾಕೊ’ (ಹೂ ಬಿಡುವ ತಂಬಾಕು) ಜಾತಿಗೆ ಸೇರಿದ ಇದರ ವೈಜ್ಞಾನಿಕ ಹೆಸರು ‘ನಿಕೋಟಿಯಾನ ಅಲಾಟ’. ವಾಣಿಜ್ಯ ಬೆಳೆಯಾದ ಹೊಗೆಸೊಪ್ಪಿನ ಸೋದರ ಸಂಬಂಧಿ. ಹೀಗಾಗೇ ಇದರ ಹೆಸರಿನೊಂದಿಗೆ ತಂಬಾಕು ತಳುಕು ಹಾಕಿಕೊಂಡಿದೆ.



ಬಿಸಿಲು ಬೀಳುವ ಪ್ರದೇಶಗಳಲ್ಲಿ ಬೆಳೆಯುವ ಈ ಸಸ್ಯದ ಎಲೆ ಹಸುರು ಬಣ್ಣದ್ದಾಗಿದ್ದು – ಹೂವುಗಳು ಬಿಳಿ, ಕೆಂಪು, ಹಳದಿ, ಹಸುರು, ನೇರಳೆ, ಕೆನೆ ಬಣ್ಣ, ಕಡು ಗುಲಾಬಿ, ಸಿಟ್ರಾನ್ ಮುಂತಾದ ಬಣ್ಣಗಳಲ್ಲಿರುತ್ತವೆ. ಹೂವುಗಳು ಕೊಳವೆ ಆಕಾರದಲ್ಲಿದ್ದು, ತುದಿಯಲ್ಲಿ ನಕ್ಷತ್ರ ಆಕಾರ ಹೊಂದಿರುತ್ತವೆ. ಬಿಳಿ ಹೂವುಗಳಂತೂ ರಾತ್ರಿ ಹೊತ್ತು ಅತ್ಯಾಕರ್ಷಕವಾಗಿರುತ್ತವೆ. ಹಗಲು ಹೊತ್ತಿನಲ್ಲಿ ಮುದುಡಿದ್ದ ಹೂಗಳು ಸಂಜೆಯಾಗುತ್ತಿದ್ದಂತೆ ಅರಳಲು ಆರಂಭಿಸಿ ಗಾಢ ಮಾದಕ ಸುಗಂಧ ಬೀರುತ್ತಾ, ರಾತ್ರಿಯಾಗುತ್ತಿದ್ದಂತೆ ಪೂರ್ಣ ಪ್ರಮಾಣದಲ್ಲಿ ಅರಳುತ್ತವೆ. ಈ ರೀತಿ ಗಾಢ ಸುಗಂಧ ಸೂಸುವುದೇ ಇದಕ್ಕೆ ಮಲ್ಲಿಗೆ ತಂಬಾಕು ಎಂಬ ಹೆಸರು ಬರಲು ಕಾರಣವಂತೆ. ಈ ಗಿಡದ ಎಲೆಗಳು ತಂಬಾಕಿನಂತೆಯೇ ಉದ್ದವಾಗಿ, ಒರಟಾಗಿ, ಅಂಟಂಟಾಗಿರುತ್ತವೆ. ಈ ಸಸ್ಯದ ಎಲ್ಲಾ ಭಾಗಗಳಲ್ಲೂ ಅತ್ಯಲ್ಪ ಪ್ರಮಾಣದ ಮಾದಕ ದ್ರವ್ಯವಿರುತ್ತದೆ.

ಅಮೆರಿಕ, ಅರ್ಜೆಂಟೀನಾ, ಬ್ರೆಜಿಲ್, ಮೆಕ್ಸಿಕೊ, ಯೂರೋಪ್ ಹಾಗೂ ಏಷ್ಯಾದ ಕೆಲವು ಪ್ರದೇಶಗಳಲ್ಲಿ ಇದರ ಕೃಷಿ ಮಾಡಲಾಗುತ್ತಿದೆ. ಇವುಗಳನ್ನು ಮನೆಯೊಳಗಿನ ಬಿಸಿಲು ಬೀಳುವ ಜಾಗದಲ್ಲಿ ಹೂ ಕುಂಡಗಳಲ್ಲಿ ಹಾಗೂ ಮನೆಯ ಹಿತ್ತಲಿನಲ್ಲಿಯೂ ಬೆಳೆಸಬಹುದು. ಈ ಗಿಡಗಳು ಹೂ ಬಿಡುವುದು ಜೂನ್ ತಿಂಗಳಿನಿಂದ ಚಳಿಗಾಲ ಪ್ರಾರಂಭವಾಗುವವರೆಗೆ.

ಸುಮಾರು ಐವತ್ತರಿಂದ ಅರವತ್ತು ನಿಕೋಟಿಯಾನ ಸಸ್ಯ ಪ್ರಭೇದಗಳಿದ್ದು, ಅವುಗಳಲ್ಲಿ ಕೆಲವನ್ನು ಆಲಂಕಾರಿಕ ಸಸ್ಯಗಳಾಗಿ ಬಳಸಲಾಗುತ್ತಿದೆ. ಹೂವಿನ ಬಣ್ಣ, ಗಿಡಗಳ ಆಕಾರಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಿರುವ ನಿಕೋಟಿಯಾನ ಸಿಲ್ವೆಸ್ಟ್ರಿಸ್, ನಿಕೋಟಿಯಾನಾ ಟಬಾಕಂ, ನಿಕೋಟಿಯಾನಾ ಮ್ಯುಟಾಬಿಲಿಸ್ ನಿಕೋಟಿಯಾನ ಪ್ರಭೇದದ ಆಲಂಕಾರಿಕ ಸಸ್ಯಗಳು. ನಿಕೋಟಿಯಾನ ಅಲಾಟವನ್ನು ಕೀಟನಾಶಕ ಹಾಗೂ ಶಿಲೀಂಧ್ರ ನಾಶಕಗಳಲ್ಲಿ ಬಳಸುತ್ತಾರೆ. ಅಂತೆಯೇ ಇದರ ಇತರ ಪ್ರಭೇದಗಳನ್ನು ಅಮೆರಿಕದ ಬುಡಕಟ್ಟು ಜನರು ಗಾಯಗಳನ್ನು ಗುಣಪಡಿಸಲು ಬಳಸುತ್ತಾರಂತೆ. ■

